ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) : ಅಧ್ಯಕ್ಷರೇ, ರೇಣುಕ ಎಲ್ಲಮ್ಮ ದೇವಸ್ಥಾನ (ಆಡಳಿತ) (ತಿದ್ದುಪಡಿ) ವಿಧೇಯಕ 1993ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

(ಪ್ರಸ್ತಾಪ ಮಂಡಿಸಲ್ಪಟ್ಟಿತು)

ಶ್ರೀ ಎಂ. ರಾಜಶೇಖರಮೂರ್ತಿ : ಮಾನ್ಯ ಅಧ್ಯಕ್ಷರೇ, ರೇಣುಕ ಎಲ್ಲಮ್ಮ ದೇವಸ್ಥಾನ ಅಡ್ಮಿನಿಸ್ಟ್ರೇಷನ್ ಆಕ್ಟ್ ಎನ್ನುವುದು 1974ರಲ್ಲಿ ಜಾರಿ ಆಯಿತು. ಅದಕ್ಕೆ 1975ರಲ್ಲಿ ರೂಲ್ಸ್ ಫ್ರೇಮ್ ಮಾಡಿದರು. ಆಕ್ಟ್‌ನಲ್ಲಿ ಏಪ್ರಿಲ್ 1ರಿಂದ ಮಾರ್ಚ್ 31ರವರೆಗೆ ಅಫಿಷಿಯಲ್ ಇಯರ್ ರೂಲ್ಸ್‌ನಲ್ಲಿ ಫಾರಮ್ ಎಲ್ಲಾ ಸೇರಿ ಎಕ್ಸ್‌ಪೆಂಡೀಚರ್ - ಇನ್‌ಕಮ್ ಸ್ಟೇಟ್‌ಮೆಂಟ್ ಕೊಡುವಾಗ ಅದನ್ನು ಏಪ್ರಿಲ್ 1ರಿಂದ ಮಾರ್ಚ್ 31ರವರೆಗೆ ಎಂದು ಹೇಳಿದ್ದಾರೆ. ಇವೆರಡು ಒಂದೇ ಕಾಲದಲ್ಲಿ ಎನ್ನುವ ದೃಷ್ಟಿಯಿಂದ ಅಫಿಶಿಯಲ್‌ಯರ್‌ನ್ನು ಆಕ್ಟನಲ್ಲಿ ಏಪ್ರಿಲ್ ಒಂದರಿಂದ ಮಾರ್ಚ್ ಮೂವತ್ತೊಂದರವರೆಗೆ ಮಾಡಬೇಕೆಂದು ಇದೆ. ಇದು ಬಹಳ ಸಿಂಪಲ್ ಅಮೆಂಡ್‌ಮೆಂಟ್ ಇರುವ ಕಾರಣ ಇದರ ಬಗ್ಗೆ ಚರ್ಚೆ ಏನೂ ಬೇಕಾಗಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಚರ್ಚೆ ಮಾಡುವುದು ಏನು ಹೆಚ್ಚಲ್ಲ, ಅದು ಬರಿ ಇಯರ್ ಚೆಂಜ್ ಮಾಡುತ್ತಿರುವುದು. ಈ ಬಿಲ್ ಪಾಸ್ ಆಗುವುದಾದರೆ ನಮ್ಮ ಅಡ್ಡಿ ಏನೂ ಇಲ್ಲ. ಆದರೆ ಈ ಎಲ್ಲಮ್ಮ ಗುಡಿಗೆ ತಾವು ಹೋಗಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ; ನಾವು ಹೋಗಿದ್ದೇವೆ, ತಾವು ಹೋಗಿ ಆಶೀರ್ವಾದ ತೆಗೆದುಕೊಂಡು ಬರಬೇಕು. ಅಲ್ಲಿ ಭಕ್ತಾಧಿಗಳಿಗೆ ಇನ್ನೂ ಸಾಕಷ್ಟು ಸರಿಯಾದ ವ್ಯವಸ್ಥೆಯಾಗಬೇಕು. ಸ್ಯಾನಿಟೇಷನ್ ದೃಷ್ಟಿಯಿಂದ ಏಕೆಂದರೆ ಅದು ನಿಮ್ಮ ಕಂಟ್ರೋಲ್‌ನಲ್ಲಿ ಇದೆ. ಬೋರ್ಡ್ ಆಫ್ ಟ್ರಸ್ಟಿಗಳು ಇಲ್ಲಿ ಬರುತ್ತಾರೆ . ನಮ್ಮ ಕಾಲದಲ್ಲಿ ಇದನ್ನು ನಾವು ಮಾಡಿದೆವು. ಆದುದರಿಂದ ನೀವು ಮಾಡಿದ್ದು ಎಂದು ಹೇಳುತ್ತಿಲ್ಲ. ನಾವು ಏನು ಮಾಡಿದೆವು ಅಂದರೆ ನಮಗೆ ಯಾರು ಬೇಕು ಅವರನ್ನು ಅಲ್ಲಿ ಹಾಕುತ್ತಿದ್ದೆವು. ಆದರೆ ಅಲ್ಲಿ ಸುವ್ಯವಸ್ಥೆ ಇಲ್ಲ. ಆದುದರಿಂದ ಬೋರ್ಡ್‌ಗೆ ನಾಮಿನೇಷನ್ ಮಾಡುವಾಗ ಇದರ ಬಗ್ಗೆ ಚಿಂತನೆ ಇರುವ ಕಾಳಜಿ ಇರುವ ಜನರನ್ನು ಹಾಕಿ. ಮತ್ತು ಆ ದೇವಸ್ಥಾನಕ್ಕೆ ಬರುವ ಭಕ್ತಾಧಿಗಳಿಗೆ ಸೌಲಭ್ಯ ಕೊಡಬೇಕು. ಅಲ್ಲಿ ಸಾಕಷ್ಟು ಹಣ ಇದೆ. ಆದುದರಿಂದ ಸರಿಯಾದ ಸೌಲಭ್ಯ ಕೊಡುವ ವ್ಯವಸ್ಥೆ ಮಾಡಲಿಕ್ಕೆ ತಾವು ಪ್ರಯತ್ನ ಮಾಡಿ ಎಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷರೇ, ನಾನು ಒಂದು ಸಾರಿ ಈ ದೇವಸ್ಥಾನಕ್ಕೆ ಹೋಗತಕ್ಕ ಅವಕಾಶ ಸಿಕ್ಕಿತ್ತು. ನಾನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷನಾಗಿದ್ದೆ. ಹುಬ್ಬಳ್ಳಿಗೆ ನೀರು ಸರಬರಾಜು ಆಗುವ ಹೆಡ್‌ವರ್ಕ್ಸ್ ಇಲ್ಲೇ ಇದೆ.

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) : ಎಲ್ಲಮ್ಮ ದೇವಸ್ಥಾನ ಚಂದ್ರಗುತ್ತಿಯಲ್ಲಿದೆ. ಮಾನ್ಯ ಸದಸ್ಯರು ವೇಮಗಲನವರು. ಎಲ್ಲಮ್ಮನ ಜಾತ್ರೆಗೂ ಮುಲ್ಲಾ ಸಾಬಿಗೂ ಏನು ಎಂದು ಆ ಕಡೆ ಒಂದು ಗಾದೆ ಇದೆ. ಅದರಂತೆ ನಿಮಗೂ ಆ ಎಲ್ಲಮ್ಮನ ದೇವಸ್ಥಾನಕ್ಕೂ ಏನು ಸಂಬಂಧ?

ಶ್ರೀ ಸಿ. ಬೈರೇಗೌಡ : ಒಂದು ಅರ್ಥದಲ್ಲಿ ನಿಜ, ಈ ಗೊಕುಲಾಷ್ಟಮಿಗೂ ಇಮಾಮ್‌ಸಾಬಿಗೂ ಸಂಬಂಧ ಇರುವ ಹಾಗೆ ನನಗೂ ಆ ದೇವಸ್ಥಾನಕ್ಕೂ ಸಂಬಂಧವಿದೆ.

ಶ್ರೀ ಕೆ. ಹೆಚ್. ರಂಗನಾಥ್ : ತಾವು ಹೇಳಿದಿರಲ್ಲಾ ಹಳ್ಳಿ ಭಾಷೆ ಎಂದು ಅದಕ್ಕೆ ಹೇಳಿದೆ;

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೇ, ಅಲ್ಲಿಗೆ ಹೋಗಿದ್ದ ಸಂದರ್ಭದಲ್ಲಿ ನಮ್ಮ ಅಧಿಕಾರಿಗಳು ಆ ದೇವಸ್ಥಾನಕ್ಕೆ ಕರೆದುಕೊಂಡು ಹೋದರು; ಅಲ್ಲಿ ಯಲ್ಲಮ್ಮ ಇದ್ದಾಳೋ, ಯಾಯಮ್ಮ ಇದ್ದಾಳೋ ಎಂದು ನನಗಂತೂ ಅನುಮಾನ ಬಂದು ಬಿಟ್ಟಿತು. ಏಕೆಂದರೆ ಅಲ್ಲಿಗೆ ಮನುಷ್ಯನಾದವನು ಹೋಗುವುದಕ್ಕೆ ಸಾಧ್ಯವೇ ಇಲ್ಲ.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ : ಆ ಮಾತು ಹಿಂತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಶಿವಾನಂದ ಹೆಚ್. ಕೌಜಲಗಿ : ಆ ದೇವಸ್ಥಾನದ ಬಗ್ಗೆ ನಮಗೆ ಬಹಳ ನಂಬಿಕೆ ಇದೆ.

ಶ್ರೀ ಆರ್. ವಿ. ದೇಶಪಾಂಡೆ : ಎಲ್ಲಮ್ಮನ ಬಗ್ಗೆ ಅವರು ಏಕೆ ಮಾತನಾಡಿದರು ಎಂದರೆ ಅವರು ವೇಮಗಲ್‌ನವರು, ಅದರ ಮಹತ್ವ ಅವರಿಗೆ ಗೊತ್ತಿಲ್ಲ. ಆ ಭಾಗದಿಂದ ಲಕ್ಷಾಂತರ ಜನ ಭಕ್ತಾದಿಗಳು ಆ ದೇವಸ್ಥಾನಕ್ಕೆ ಬರುತ್ತಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ನಾನು ಕೌಜಲಗಿರವರು ಹೇಳಿರುವ ವಿಷಯಕ್ಕೆ ಬರುತ್ತೇನೆ. ನಾನು ದೇವರ ಬಗ್ಗೆ ಅಲ್ಲ ಹೇಳಿರತಕ್ಕಂತದ್ದು; ಅಲ್ಲಿರುವ ವ್ಯವಸ್ಥೆ ಬಗ್ಗೆ. ಆ ವ್ಯವಸ್ಥೆಯನ್ನು ಮನುಷ್ಯನಾಗಿರತಕ್ಕವನು ತಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಮ್ಮ ಭಾಷೆ ನಿಮಗೆ ಅರ್ಥವಾಗದೆ ಇದ್ದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ? ಈ ದೇವಸ್ಥಾನಕ್ಕೆ ನಾನು ಏನು ಮಾಡಿದ್ದೇನೆ. ನೀವು ಏನು ಮಾಡಿದ್ದೀರಿ ಎನ್ನುವುದನ್ನು ಹೇಳುತ್ತೇನೆ. ಕುಳಿತುಕೊಳ್ಳಿ, ಅಧ್ಯಕ್ಷರೇ ಅಲ್ಲಿಗೆ ನಾನು ಹೋದ ಸಂದರ್ಭದಲ್ಲಿ ಕುಡಿಯಲಿಕ್ಕೆ ನೀರೂ ಇರಲಿಲ್ಲ. ಇವತ್ತು ಕೌಜಲಗಿಯವರು ಮಾತನಾಡುತ್ತಿದ್ದಾರೆ. ನಾನು ನಮ್ಮ ಅಧಿಕಾರಿಗಳನ್ನು ಆಗ ಕರೆದು

ಒಂದು ತಿಂಗಳೊಳಗಾಗಿ ಆ ದೇವಸ್ಥಾನಕ್ಕೆ ನೀರನ್ನು ಕೊಡಬೇಕೆಂದು ಕಟ್ಟಾಜ್ಞೆಯನ್ನು ಮಾಡಿ ಬಂದೆ. ಆ ದೇವಸ್ಥಾನದಲ್ಲಿ ಇವತ್ತು ಏನಾದರೂ ನೀರು ಸಿಗುತ್ತಿದ್ದರೆ ಅದಕ್ಕೆ ನಾನು ಕಾರಣ.

3.55 ಪಿ. ಎಂ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಿಮಗಿಂತ ಮುಂಚೆ ನಾವು ಅದರ ಬಗ್ಗೆ ಕ್ರಮ ಕೈಗೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ : ಯಾಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದು ಅರ್ಥಮಾಡಿಕೊಳ್ಳಬೇಕು. ಅಲ್ಲಿಗೆ ಹೋಗತಕ್ಕ ಯಾತ್ರಾರ್ಥಿಗಳಿಗೆ, ಭಕ್ತಾದಿಗಳಿಗೆ ಯಾವ ವ್ಯವಸ್ಥೆಯೂ ಇಲ್ಲ. ಅದನ್ನು ನಾನು ಕಣ್ಣಾರೆ ಕಂಡಿದ್ದರಿಂದ ನಾನು ಮಾತನಾಡುತ್ತಿದ್ದೇನೆ. ಬೇರೆ ಯಾವುದೇ ಕಾರಣದಿಂದ ಅಲ್ಲವೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇವೊತ್ತು ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುವುದು. ಏನೆಂದರೆ, ತಾವು ದಯವಿಟ್ಟು ಅಲ್ಲಿಗೆ ಹೋಗಿ ಬನ್ನಿ. ಅಲ್ಲಿ ಆಗಬೇಕಾದಂಥ ಕೆಲಸಗಳು ಸಾಕಷ್ಟು ಇವೆ. ಅದಕ್ಕೆ ಆದ್ಯತೆಯನ್ನು ಕೊಡಿ. ಅವನ್ನು ಕೊಡದಿದ್ದರೆ ಅಲ್ಲಿಗೆ ಹೋಗತಕ್ಕ ಭಕ್ತಾದಿಗಳಿಗೆ ಹಿಂಸೆಯಾಗುತ್ತದೆ. ಅದನ್ನು ತಪ್ಪಿಸುವ ಕೆಲಸ ಮಾಡಿ ಎಂದು ಈ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಇವೊತ್ತಿನ ದಿವಸ ಮಾನ್ಯ ಕಂದಾಯ ಸಚಿವರು ತಂದ ಮಸೂದೆಯನ್ನು ಸ್ವಾಗತಿಸುತ್ತೇನೆ. ಈ ಯಲ್ಲಮ್ಮ ದೇವಸ್ಥಾನದ ಬಗ್ಗೆ ಎರಡು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ. ಮೊದಲನೆಯದು ಇವೊತ್ತು ಒಂದು ಬೋರ್ಡ್ ಆಫ್ ಟ್ರಸ್ಟೀಸ್ ಇದೆ. ಆ ಬೋರ್ಡ್ ಆಫ್ ಟ್ರಸ್ಟೀಸ್‌ಗೆ ಯಾರಿಗೆ ಆ ದೇವಸ್ಥಾನದ ಬಗ್ಗೆ ಅಭಿಮಾನ ಹೆಚ್ಚು ಇದೆ, ಅವರನ್ನು ನೇಮಿಸಬೇಕು. ಏತಕ್ಕೆಂದರೆ ಕೆಲವೊಂದು ನಾಮಿನೇಷನ್ಸ್ ಆಗತಕ್ಕ ಕಾಲದಲ್ಲಿ ಬೇರೆ ಬೇರೆ ಭಾಗಗಳಿಂದ ಬರತಕ್ಕವರೂ ಇದ್ದರೆ ಅದರಿಂದ ಅನುಕೂಲ ಆಗುವುದಿಲ್ಲ. ದೇವಸ್ಥಾನದ ಅಭಿವೃದ್ಧಿ ಬಗ್ಗೆ ಆಸಕ್ತಿ ಇರುವವರನ್ನೇ, ಈ ಬೋರ್ಡಿಗೆ ನೇಮಿಸಬೇಕು. ಇವರು ಆಸಕ್ತಿಯನ್ನು ತೆಗೆದುಕೊಳ್ಳದಿದ್ದರೆ ಈ ದೇವಸ್ಥಾನ ಹೆಚ್ಚು ಅಭಿವೃದ್ಧಿ ಆಗುವುದಿಲ್ಲ. ಆದುದರಿಂದ ತಾವು ದಯಮಾಡಿ ಆ ಭಾಗದಲ್ಲಿ ಇರತಕ್ಕ ಜನ ಮತ್ತು ಈ ದೇವಸ್ಥಾನದ ಅಭಿವೃದ್ಧಿ ಸಲುವಾಗಿ ಯಾರಿಗೆ ಮನಸ್ಸು ಇದೆ ಅಂಥವರನ್ನು ಮಾತ್ರ ಬೋರ್ಡ್ ಆಫ್ ಟ್ರಸ್ಟೀಸ್‌ಗಳಾಗಿ ನೇಮಿಸಬೇಕು. ಇನ್ನು ಎರಡನೇಯದಾಗಿ ಆ ಟ್ರಸ್ಟೀಸ್‌ಗಳಲ್ಲಿ ಮತ್ತು ಆ ದೇವಸ್ಥಾನದ ಪೂಜಾರಿಗಳಲ್ಲಿ ವಿವಾದ ಇದೆ. ಇದರಿಂದ ಇವೊತ್ತು ಅಲ್ಲಿ ತೊಂದರೆ ಉಂಟಾಗಿದೆ. ಆದುದರಿಂದ ತಾವು ಒಂದು ರಾಜಿ ಮಾಡಿಸಿದರೆ ಒಳ್ಳೆಯದು.

ಶ್ರೀ ಕೆ. ಹೆಚ್. ರಂಗನಾಥ್ : ಯಾರಿಗೆ ರಾಜಿ ಮಾಡಲು ಹೇಳುತ್ತಿದ್ದೀರಿ?

ಶ್ರೀ ಶಿವಾನಂದ ಹೆಚ್. ಕೌಜಲಗಿ : ಕಂದಾಯ ಸಚಿವರು, ಮುಜರಾಯಿ ಸಚಿವರೂ ಕೂಡ ಆಗಿದ್ದಾರೆ. ಅವರಿಗೆ ಹೇಳುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗಾನಾಥ್ : ಅವರು ಬರೀ ಕೇಳುತ್ತಾರೆ ; ಹೇಳುವುದಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾವು ಹೇಳಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಈ ಭಾಗದಲ್ಲಿ ಡೆವಲಪ್‌ಮೆಂಟ್ಸ್ ಆಗಿಲ್ಲ. ಆದುದರಿಂದ ಬೇರೆ ಬೇರೆ ಇಲಾಖೆಗಳ ವತಿಯಿಂದ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್‌ಗಳನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಶ್ರೀ ಕೆ. ಹೆಚ್. ಪಾಟೀಲರು ನಿಜವಾಗಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ. ಯಾರೇ ಒಳ್ಳೆಯ ಕೆಲಸ ಮಾಡಿದರೂ ಸಹ ಅವರನ್ನು ನಾವು ನೆನೆಯಬೇಕು. ಅಲ್ಲಿ ನೀರಿನ ವ್ಯವಸ್ಥೆ ರಸ್ತೆ ದೀಪ ಇವುಗಳನ್ನೆಲ್ಲಾ ಒದಗಿಸಲು ಡಿವಿಜನಲ್ ಕಮಿಷನರ್‌ರವರ ಛೇರ್‌ಮನ್-ಶಿಪ್‌ನಲ್ಲಿ ಸಮಿತಿ ಇದೆ. ಆದರೆ ಇನ್ನೂ ಡೆವಲಪ್‌ಮೆಂಟ್ ಆಗಿಲ್ಲ. ತಾವು ಆ ಭಾಗಕ್ಕೆ ಬರಬೇಕು ಆ ದೇವಸ್ಥಾನಕ್ಕೆ ಭೇಟಿ ಕೊಡಬೇಕು. ಭೇಟಿ ಕೊಟ್ಟು ಅಲ್ಲಿ ಇರತಕ್ಕ ಪೂಜಾರಿಗಳು ಮತ್ತು ಟ್ರಸ್ಟಿಗಳ ವಿವಾದವನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ 40 ಲಕ್ಷ ವಾರ್ಷಿಕ ವರಮಾನ ಬರುತ್ತದೆ. ಆದರೆ ಅಲ್ಲಿ ಯಾವ ಪ್ರಕಾರ ಡೆವಲಪ್‌ಮೆಂಟ್ ಆಗಬೇಕಾಗಿತ್ತೋ ಆ ರೀತಿ ಡೆವಲಪ್‌ಮೆಂಟ್ ಆಗಿಲ್ಲ. ಈ ದೇವಸ್ಥಾನವನ್ನು ಇನ್ನೂ ಹೆಚ್ಚು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ : ಈ ಮಸೂದೆ ಬಹಳ ಸಿಂಪಲ್ ಮಸೂದೆ. ಅಫಿಶಿಯಲ್ ಇಯರ್ ಮಾತ್ರ. ಬದಲಾವಣೆ ಮಾಡಬೇಕು ಎನ್ನತಕ್ಕದ್ದರ ಬಗ್ಗೆ ನಾವು ತಂದಿರತಕ್ಕ ತಿದ್ದುಪಡಿ ಇದ್ದರೂ ಕೂಡ ಇದರ ಮೇಲೆ ಚರ್ಚೆ ಮಾಡತಕ್ಕ ಕಾಲದಲ್ಲಿ ಕೆಲವು ಉಪಯುಕ್ತವಾದ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ನಾನು ಈ ದೇವಸ್ಥಾನವನ್ನು ನೋಡಿಲ್ಲ. ಆದರೆ ಕೇಳಿದ್ದೇನೆ. ಇದು ಒಂದು ಬಹಳ ದೊಡ್ಡ ದೇವಸ್ಥಾನ. ಇದು ಬಹಳ ಪ್ರಸಿದ್ಧವಾದ ಹಾಗೂ ಪವಿತ್ರವಾದ ಸ್ಥಳ ಎಂದು ಇಲ್ಲಿಗೆ ಅನೇಕ ಭಕ್ತಾದಿಗಳು ನಮ್ಮ ರಾಜ್ಯದಿಂದ ಅಷ್ಟೇ ಅಲ್ಲ, ಮಹಾರಾಷ್ಟ್ರದಿಂದ ಕೂಡ ಬರುತ್ತಾರೆ ಎಂದು ಕೇಳಿದ್ದೇವೆ. ಈ ಸಂದರ್ಭದಲ್ಲಿ ಕೆಲವು ಉತ್ತಮವಾದ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಈ ದೇವಸ್ಥಾನದ ಅಭಿವೃದ್ಧಿ ಕಾರ್ಯಗಳನ್ನು ಕೈಗೆ ತೆಗೆದುಕೊಳ್ಳಬೇಕು. ಯಾತ್ರಾರ್ಥಿಗಳು ಹೊರಗಡೆಯಿಂದ ಯಾರು ಬರುತ್ತಾರೆ. ಅವರುಗಳು ಇಳಿದುಕೊಳ್ಳಲು ಸಾಕಾದಷ್ಟು ವ್ಯವಸ್ಥೆ ಮಾಡಬೇಕು ಹಾಗೂ ಇನ್ನೂ ಅನೇಕ ಅನುಕೂಲತೆಗಳನ್ನು ಅಲ್ಲಿ ಕಲ್ಪಿಸಬೇಕು ಎಂದು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ನಾನು ಮಾನ್ಯ ಸದಸ್ಯರುಗಳೊಂದಿಗೆ ಆ ಸ್ಥಳಕ್ಕೆ ಭೇಟಿ ಕೊಡುತ್ತೇನೆ, ನಾನೇ ಖುದ್ದಾಗಿ ಹೋಗಿ ನೋಡಿ ಅಲ್ಲಿ ಏನೇನು ತೊಂದರೆಗಳು ಇವೆ, ಅವುಗಳನ್ನು ಪರಿಹಾರ ಮಾಡಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇನೆ, ಇಷ್ಟು ಹೇಳಿ ಈ ಮಸೂದೆಯನ್ನು ಪಾಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : '1990ರ ರೇಣುಕಾ ಎಲ್ಲಮ್ಮ ದೇವಸ್ಥಾನ (ಆಡಳಿತ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.'

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2

ಅಧ್ಯಕ್ಷರು : 'ಖಂಡ 2 ವಿಧೇಯಕದ ಅಂಗವಾಗಿರುತ್ತದೆ.'

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಖಂಡ 2 ಇದನ್ನು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1- ಇತ್ಯಾದಿ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : 'ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.'

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.5)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು) : I beg to move : " That the Renuka Yellamma Devasthana (Administration) (Amendment) Bill, 1993 be passed."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : "1993ರ ರೇಣುಕಾ ಎಲ್ಲಮ್ಮ ದೇವಸ್ಥಾನ (ಆಡಳಿತ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯತ್ ಸಮಿತಿಗಳು ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ, 1993.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೋಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ1993ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್ತುಗಳ ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿ ಸಮಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ''

(ಪ್ರಸ್ತಾವವನ್ನು ಮಂಡಿಸಲಾಯಿತು)

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಇದು ಬರೀ ಮಂಡಲ ಪಂಚಾಯಿತಿಗಳ ಚುನಾಯಿತ ಸದಸ್ಯರುಗಳು ವಿಫಲರಾದರೆ ಆಡಳಿತ ಸಮಿತಿ ಅಥವಾ ಆಡಳಿತಗಾರರ ನೇಮಕಾತಿ ವಿಚಾರ ಇಷ್ಟೇ ಇದರಲ್ಲಿ ಇರತಕ್ಕಂಥದ್ದು. ಈ ಬಗ್ಗೆ ಈಗಾಗಲೇ ಆರ್ಡಿನೆನ್ಸ್‌ನ್ನು ಹೊರಡಿಸಿದ್ದೇವೆ. ಆಡಳಿತಾಧಿಕಾರಿಗಳದ್ದು ಅವಧಿ ಮುಗಿಯುವುದರಿಂದ ಅದಕ್ಕೆ ನಾವು ಮತ್ತೆ ಅದನ್ನು ಮುಂದುವರಿಸಬೇಕು ಎಂದು ಹೇಳಿ ನಾವು ಆರ್ಡಿನೆನ್ಸ್ ಹೊರಡಿಸಿದ್ದೇವೆ. ಅದನ್ನು ಆರ್ಡಿನೆನ್ಸ್ ಬಿಲ್ ಆಗಿ ಇವತ್ತು ಈ ಸದನದ ಮುಂದೆ ತರುತ್ತಿದ್ದೇನೆ. ಇದಕ್ಕೆ ಎಲ್ಲರೂ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ಬಿಲ್ಲಿಗೆ ನನ್ನ ವಿರೋಧ ಇದೆ. ಅವರು ಪಾಸ್ ಮಾಡಿಕೊಳ್ಳಬಹುದು, ಮೆಜಾರಿಟಿ ಇದೆ ಎಂದು. ಆದರೆ ಮೂಲತಃ ಕಾಯ್ದೆಯಲ್ಲಿ ಏನು ಅವಕಾಶ ಇತ್ತು ಎಂದರೆ ಮ್ಯಾಕ್ಸಿಮಮ್ ಒಂದು ವರ್ಷ ಇರಬಹುದು ಎಂದು ಇತ್ತು. ಇವತ್ತು ಈ ಚುನಾವಣೆ ಆಗಬಾರದು,ಚುನಾವಣೆಯನ್ನು ಮುಂದೆ ಹಾಕಬೇಕು ಎಂದು ಹೊರಟಿದ್ದಾರೆ. ಚುನಾವಣೆ ಮಾಡುವುದಕ್ಕೆ ಯಾವ ಸಿದ್ಧತೆಯೂ ಇವರದ್ದು ಇಲ್ಲ. ಹಾಗಾಗಿ ಇವತ್ತು ಏನು ಮಾಡಿದ್ದಾರೆ. ಎಂದರೆ ಡೆಪ್ಯುಟಿ ಕಮಿಷನರಿಗೆ ಬ್ಲಾಂಕೆಟ್ ಪವರ್ ಕೊಟ್ಟಿದ್ದಾರೆ. ಜಿಲ್ಲಾಧಿಕಾರಿ ಮನಸ್ಸಿಗೆ ಬಂದ ಹಾಗೆ ಮುಂದೆ ಹಾಕಬಹುದು. , ಹತ್ತು ವರ್ಷವೂ ಅಲ್ಲಿ ಅಡ್ಮಿನಿಸ್ಟ್ರೇಟರ್ ಇರಬಹುದು. ಇವರು ನಿನ್ನೆ ಒಂದು ಮಸೂದೆಯನ್ನು ಪಾಸ್ ಮಾಡಿಕೊಂಡು ಹೋಗಿದ್ದಾರೆ. ಆ ಮನೆಯಲ್ಲಿ ಅದು ಪಾಸಾಗಿ ಅದಕ್ಕೆ ಅಸೆಂಟ್ ಬರುವತನಕ ನಿಮ್ಮ ಕಡೆ ಒಂದು ಬ್ಲಾಂಕೆಟ್ ಪವರ್ ಇದೆ. ನಾನು ನಿಮಗೆ ಇಷ್ಟೇ ಕಾಷನ್ ಇಲ್ಲಿ ಮಾಡುತ್ತಿದ್ದೇವೆ, ಇವತ್ತು ನೀವು ಅಡ್ಮಿನಿಸ್ಟ್ರೇಟರನ್ನು ಅಲ್ಲಿ ಹಾಕುವುದಕ್ಕೆ ಬ್ಲಾಂಕೆಟ್ ಪವರನ್ನು ತೆಗೆದುಕೊಂಡು ಹೋಗುತ್ತಿದ್ದೀರಿ. ಅದು ಸರಿಯಲ್ಲ. ಈ ರೀತಿಯ ಬಿಲ್ ತಂದು ನೀವು ಪ್ರಜಾಪ್ರಭುತ್ವದಲ್ಲಿ ಗದಾಪ್ರಹಾರ ಮಾಡುತ್ತಿದ್ದೀರಿ. ಚುನಾಯಿತ ಪ್ರತಿನಿಧಿಗಳ ಬಗ್ಗೆ ನಿಮಗೆ ವಿಶ್ವಾಸ ಇಲ್ಲ. ಹಾಗಾಗಿ ನಾನು ಈ ಬಿಲ್ಲನ್ನು ವಿರೋಧ ಮಾಡುತ್ತಾ ನಾನು ಈ ಬಿಲ್ಲನ್ನು ವಿರೋಧ ಮಾಡುತ್ತಾ ನಾನು ಇಷ್ಟೇ ಹೇಳುತ್ತೇನೆ, ಇದು ಒಂದು ನೆವ ಆಗಿ ಚುನಾವಣೆಯನ್ನು ಮುಂದಕ್ಕೆ ಹಾಕುವುದಕ್ಕೆ ಇದು ಒಂದು ಸರ್ಕಾರದ ತಂತ್ರ ಇದೆ. ಸರ್ಕಾರದ ಮೇಲೆ ನನ್ನ ಸ್ಪಷ್ಟವಾದ ಅಪಾದನೆ.

*ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೇ, ಸುಪ್ರೀಂ ಕೋರ್ಟ್ ತೀರ್ಮಾನವನ್ನು ಜಾರಿಗೆ ತರುತ್ತೇವೆ ಎಂದು ಈ ಸಭೆಯಲ್ಲಿ ಮಾತು